ಓ.ಎಸ್.ನಂ.42/2025

ಪಿ ಡಬ್ಲ್ಯೂಃ 1

ದಿನಾಂಕ 29.06.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಿಂದಃ**

ನನ್ನ ಸಾಕ್ಷಿ ಪ್ರಮಾಣ ಪತ್ರ ಮತ್ತು ವಾದ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ಹೀಲದಹಳ್ಳಿ ಗ್ರಾಮ ಮೊದಲು ಹೊಳೆಯ ದಂಡೆಯ ಮೇಲಿತ್ತು. ನನ್ನ ಅಜ್ಜ ಸೋಮಲಿಂಗಪ್ಪನಿಗೆ ಒಟ್ಟು 6 ಜನ ಮಕ್ಕಳು. ಮೂಲತಃ ಸದರಿ 6 ಜನ ಮಕ್ಕಳು ಒಟ್ಟಿಗೆ ವಾಸ ಇದ್ದರು ಎಂದರೆ ಸರಿ. ಹೀಲದಹಳ್ಳಿ ಗ್ರಾಮ 1992 ರಲ್ಲಿ ಮುಳುಗಡೆಯಾಗಿರುತ್ತದೆ. ಮುಳುಗಡೆಯಾದ ನಂತರ ನಮಗೆ ಯಾವುದೇ ಜಾಗ ನೀಡಿರುವುದಿಲ್ಲ ಆದರೆ ನಾವುಗಳು ಬಂದು ಸರ್ಕಾರಿ ಜಾಗದಲ್ಲಿ ಬೇರೆ ಬೇರೆ ಮನೆ ಕಟ್ಟಿಕೊಂಡಿರುತ್ತೇವೆ. ಆ ಕುರಿತು ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಮುಳುಗಡೆಯಾದ ನಂತರ ನಾವು ಒಟ್ಟಿಗೆ ವಾಸ ಇದ್ದೇವು ಎಂದರೆ ಸಾಕ್ಷಿಯು 1997 ರಿಂದ 2002 ರ ವರೆಗೆ ಒಟ್ಟಿಗೆ ವಾಸ ಇದ್ದು ನಂತರ ಪ್ರತ್ಯೇಕ ವಾಸ ಇರುವುದಾಗಿ ನುಡಿಯುತ್ತಾರೆ.

**2.** ಗ್ರಾಮ ಪಂಚಾಯತಿಯವರು ಯಾವ ದಿನಾಂಕದಂದು ಪಟ್ಟಾ ನೀಡಿರುತ್ತಾರೆ ಎಂದು ನನಗೆ ನೆನಪಿಲ್ಲ. ದಾವಾ ಆಸ್ತಿಗೆ ನಾವು ಹೋಗುವ ಪೂರ್ವದಲ್ಲಿ ಪ್ಲಾಟ್ ನಂಬರ ಇರಲಿಲ್ಲ, ನಾವು ವಾಸ ಮಾಡಿದ ನಂತರ ಪ್ಲಾಟ್ ನಂ 18 ಎಂದು ನೀಡಿರುತ್ತಾರೆ. ಆ ಕುರಿತು ಯಾವುದೇ ನೊಂದಣಿಯಾಗಿರುವುದಿಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ಪ್ಲಾಟ್ ನಂ 22, ಪಶ್ಚಿಮಕ್ಕೆ ಪ್ಲಾಟ್ ನಂ 25, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಬಿ ಎನ್ ಪಾಟೀಲರವರ ಜಾಗ ಇರುತ್ತದೆ. ಸದರಿ ಚೆಕ್ ಬಂದಿ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ.

**3.** ನಿಪಿ 1 ರ ನಂತರ ಸರ್ಕಾರದವರು ಗೆಜೆಟ್ ನೋಟಿಫಿಕೇಶನ್ ಸಹ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕಃ 16.05.1996 ರಂದು 1982 ರಲ್ಲಿ ಮುಳುಗಡೆಯಾದ ಕಾರಣ ಬೇರೆ ಆಸ್ತಿ ನೀಡಿರುವ ಕುರಿತು ಕಂದಾಯ ಇಲಾಖೆಯವರು ಆದೇಶ ಮಾಡಿರುತ್ತಾರೆ ಎಂದರೆ ಸರಿ. ಸದರಿ ಆದೇಶದ ಪ್ರಕಾರ ದಾವಾ ಆಸ್ತಿಯು ಮೂಲತಃ ಬ್ಲಾಕ್ ನಂ 25 ಎಂದು ಹಾಲಪ್ಪ ಸೋವಲಿಂಗಪ್ಪ ಮುದ್ದಿ ಹೆಸರಿನಲ್ಲಿತ್ತು ಎಂದರೆ ನನಗೆ ಗೊತ್ತಿಲ್ಲ. ನಂತರ ಸದರಿ ಆದೇಶದಂತೆ ಹಾಲಪ್ಪನು ನಮಗೆ ಮತ್ತು ಪ್ರತಿವಾದಿಗಳಿಗೆ ವಾಸ ಇರಲು ಅನುಮತಿ ನೀಡಿರುತ್ತಾರೆ ಎಂದರೆ ಸರಿಯಲ್ಲ.

**ಮುಂದೂವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

Sd/-

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.